**ದಿನಾಂಕಃ 04.03.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರು ಶ್ರೀಃ ಎಂ.ಎ.ಎಸ್. ರವರಿಂದ.**

1. ನನ್ನ ಪ್ರತಿವಾದ ಪತ್ರ ಸಲ್ಲಿಸಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿದ್ದೇನೆ. ಅಬ್ದುಲ್ ಕರೀಮ್ ಮುಜಾವರ ನನ್ನ ಅಜ್ಜ, ಅವರಿಗೆ 3 ಜನ ಮಕ್ಕಳು. ಅವರೆಂದರೆ ಹಾರೂನ್ ರಶೀದ್, ಅಬ್ದುಲ್ ಮುನಾಫ್ ಮತ್ತು ಮೊಹಮ್ಮದ್ ಸಾದಿಕ್ ಎಂದರೆ ಸರಿ. ಹಾರೂನ್ ರಶೀದ್ ನನ್ನ ತಂದೆ ಎಂದರೆ ಸರಿ. ನನ್ನ ತಂದೆ ಈಗ ಮರಣ ಹೊಂದಿರುತ್ತಾರೆ. ಅಬ್ದುಲ್ ಮುನಾಫ್ ರವರು ಈಗ ಮರಣ ಹೊಂದಿರುತ್ತಾರೆ. ಮೊಹಮ್ಮದ್ ಸಾದಿಕ್ ಎಂದರೆ ವಾದಿ ಅವರು ನನಗೆ ಕಾಕಾ ಆಗಬೇಕು. ಸಿ.ಟಿ.ಎಸ್. ನಂ. 269/3ಎ ನನ್ನ ಅಜ್ಜನ ಸ್ವತ್ತು ಎಂದರೆ ಸರಿ. ದಾವಾ ಆಸ್ತಿ ಸಿ.ಟಿ.ಎಸ್. ನಂ. 269/3ಎ ರಲ್ಲಿ ವಿಭಾಗವಾಗಬೇಕೆಂದು ನಿಮ್ಮ ತಂದೆ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆಃ 1221/2018 ಅನ್ನು ಹೂಡಿದ್ದರು ಎಂದರೆ ಸರಿ. ಆ ದಾವೆ ಚಾಲ್ತಿಯಲ್ಲಿರುವಾಗ ನಿಮ್ಮ ತಂದೆ ಮರಣ ಹೊಂದಿದರು ಎಂದರೆ ಸರಿ. ನಿಮ್ಮ ತಂದೆ ಮರಣ ನಂತರ ನೀವು ಆ ದಾವೆಯನ್ನು ಮುಂದುವರೆಸಲಿಲ್ಲ ಎಂದರೆ ಸರಿ. ಆ ಕಾರಣಕ್ಕಾಗಿ ಆ ದಾವೆ ವಜಾ ಆಯಿತು ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಿಮ್ಮೆಲ್ಲರ ಮಧ್ಯೆ ವಿಭಾಗವಾಗಿಲ್ಲ ಎಂದರೆ ಸರಿ. ದಾವಾ ಸ್ವತ್ತು ಹಳೆ ಮನೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿಗೆ, ನಿಮಗೆ ಮತ್ತು ನಿಮ್ಮ ಕಾಕಾ ಅಬ್ದುಲ್ ಮುನಾಫ್ ರವರಿಗೆ 1/3 ಹಿಸ್ಸೆ ಇದೆ ಎಂದರೆ ಸರಿ. ಪ್ರತಿವಾದ ಪತ್ರದ ಪ್ಯಾರಾ ನಂಬರ್ 5 ರಲ್ಲಿ ಅಸಲು ದಾವಾ ಸಂಖ್ಯೆಃ 1221/2018 ಮುಗಿದ ನಂತರ ನಿಮ್ಮ ಮಧ್ಯೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ರಾಜಿ ಆಗಿದೆ ಎಂದು ಬರೆದಿರುತ್ತೀರಿ ಆ ರೀತಿ ಬರೆಯಲು ನಿಮ್ಮ

ವಕೀಲರಿಗೆ ನೀವು ಮಾಹಿತಿ ನೀಡಿದ್ದೀರಾ ಎಂದರೆ ಹೌದು ಎನ್ನುತ್ತಾರೆ. ಪ್ರತಿವಾದ ಪತ್ರದಲ್ಲಿ ರಾಜಿ ಪ್ರಕಾರ ವಾದಿ ತಮ್ಮ ಹಿಸ್ಸೆಯನ್ನು ನಿಮಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ಬರೆದಿರುತ್ತೀರಿ ಆ ರೀತಿ ದಾಖಲೆ ಆಗಿದೆಯೇ ಎಂದರೆ ಇಲ್ಲ ಎನ್ನುತ್ತಾರೆ. ಪ್ರತಿವಾದ ಪತ್ರದಲ್ಲಿ ವಾದಿಗೆ ರವರಿಗೆ ಹಣ ಕೊಟ್ಟು ಅವರ ಹಿಸ್ಸೆಯನ್ನು ಖರೀದಿ ಮಾಡಿರುತ್ತೀರಿ ಎಂದು ಬರೆದಿರುತ್ತೀರಿ ಆ ರೀತಿ ಬರೆದಿರುವುದು ಸರಿಯಾಗಿ ಇದೆಯೇ ಎಂದರೆ ಸಾಕ್ಷಿ ಆ ರೀತಿ ಆಗಿಲ್ಲ ಎನ್ನುತ್ತಾರೆ. ನಿಮ್ಮ ಮತ್ತು ವಾದಿಯ ಮಧ್ಯೆ ಹಿಸ್ಸೆಯನ್ನು ಪಡೆಯುವ ಮತ್ತು ಕೊಡುವ ವ್ಯವಹಾರ ಆಗಿಲ್ಲ ಎಂದರೆ ಸರಿ. ಎಲ್ಲರಿಗೂ ಇರುವ 1/3 ಹಿಸ್ಸೆ ಬರಬೇಕು ಎಂದು ನಿಮ್ಮ ತಂದೆ ಅಸಲು ದಾವಾ ಸಂಖ್ಯೆಃ 1221/2018 ಅನ್ನು ಹೂಡಿದ್ದರು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಿಮ್ಮ ತಂದೆ, ವಾದಿ ಮತ್ತು ಅಬ್ದುಲ್ ಮುನಾಫ್ ರವರಿಗೆ 1/3 ಹಿಸ್ಸೆ ಬಂದರೆ ನಿಮಗೆ ತೊಂದರೆ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಈಗ ನಾವು ಕಬ್ಜೆಯಲ್ಲಿರುವಂತೆ ಸ್ವತ್ತು ವಿಭಾಗವಾಗಬೇಕು ಎನ್ನುತ್ತಾರೆ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓದಿ ಹೇಳಿ ಕೇಳಿ ಸರಿಯಿದೆ.

**ಸಹಿ/-**

**4ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ,**
**ಮತ್ತು ಪ್ರದ.ನ್ಯಾದಂ. ಬೆಳಗಾವಿ.**